ಅಧ್ಯಕ್ಷರು : ಸ್ಪೋರ್ಟ್ಸ್ ಸ್ಕೂಲ್ ರನ್ ಮಾಡಬೇಕಾದರೆ ಅದಕ್ಕೆ ವಿಶೇಷವಾದ ಇನ್‌ಪ್ರಾಸ್ಟ್ರಕ್ಚರ್ ಬೇಕಾಗುತ್ತದೆ. ಮಾನ್ಯ ರಾಮ್‌ದಾಸ್‌ರವರೇ, ಸ್ಪೋರ್ಟ್ಸ್ ಸ್ಕೂಲ್ ಅಂದರೆ ನಿಮ್ಮ ಮಾಹಿತಿಗೋಸ್ಕರ ಹೇಳಿರುತ್ತೇನೆ ಹರಿಯಾಣ ಪ್ರದೇಶದ ಚೈಲ್ ಎನ್ನುವ ಊರಿನಲ್ಲಿ ಬಿಟ್ಟರೆ, ರಿಯಲ್ ಸ್ಪೋರ್ಟ್ಸ್ ಸ್ಕೂಲ್ ಬೇರೆ ಎಲ್ಲೂ ಇಲ್ಲ. ಸ್ಪೋರ್ಟ್ಸ್ ಸ್ಕೂಲ್ ಅಂದರೆ ಅದೊಂದೇ ಇರುವುದು. ನಮ್ಮ ಸದಸ್ಯರ ಒಂದು ಡೆಲಿಗೇಷನ್ ಮಾಡಿ ಯುವಕರನ್ನು ಕಳಿಸಿ ಅವರು ಆ ಶಾಲೆಯನ್ನು ನೋಡಿಕೊಂಡು ಬರಲಿ. ಆ ರೀತಿ ಮಾಡಲಿಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ.

ಶ್ರೀ ಎ. ರಾಮದಾಸ್ : ಕಡೇ ಪಕ್ಷ ಅದನ್ನು ಕನ್‌ಸಿಡರ್ ಮಾಡುತ್ತೇವೆಂದಾದರೂ ಮಾನ್ಯ ಸಚಿವರಿಂದ ಮಾನ್ಯ ಅಧ್ಯಕ್ಷರು ಹೇಳಿಸಬೇಕು. ಈಗಾಗಲೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೇವೆ.

ಅಧ್ಯಕ್ಷರು : ಯಾವುದೇ ಸರಕಾರದಲ್ಲೂ ಕೂಡ ಪರಿಶೀಲನೆಗೆ ಕೊರತೆ ಇರುವುದಿಲ್ಲ.

ಶ್ರೀ ಎ. ರಾಮದಾಸ್ : ಆ ರೀತಿಯ ಪರಿಶೀಲನೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳುತ್ತಿಲ್ಲ.

SRI AJAY KUMAR SARNAYAK : If that reply is going to satisfy him, I can give that reply.

ಅಂತರ್‌ರಾಜ್ಯ ಹೆದ್ದಾರಿ ಅಭಿವೃದ್ಧಿ ಕುರಿತು

440 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಕ್ರಾಸ್‌ನಿಂದ ಮಹಾರಾಷ್ಟ್ರದ ಜತ್‌ವರೆಗೆ ಅಂತರ್‌ರಾಜ್ಯ ಹೆದ್ದಾರಿ ಅಭಿವೃದ್ಧಿ ಕುರಿತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ.

ಆ) ಈ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಇ) ಬಂಕಾಪುರ ಕ್ರಾಸ್‌ನ ಹತ್ತಿರದ ರಾಷ್ಟ್ರೀಯ ಹೆದ್ದಾರಿ ಜಂಕ್ಷನ್ ಕೆಲಸಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ. ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೇಂದ್ರ ಸಾರಿಗೆ ಸಚಿವಾಲಯದ ಸಾಲದ ನೆರವಿನಡಿ ಅಂತರ್‌ರಾಜ್ಯ ಪ್ರಾಮುಖ್ಯತೆ ಯೋಜನೆಯಡಿಯಲ್ಲಿ 226.80 ಲಕ್ಷ ರೂ. ಗಳಿಗೆ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸಾರಿಗೆ ಸಚಿವಾಲಯದವರು ಮಂಜೂರು ಮಾಡಿರುತ್ತಾರೆ.

ಆ) ಸದರಿ ಕಾಮಗಾರಿಗೆ ಇಲಾಖಾ ನಿಯಮಾನುಸಾರ ಟೆಂಡರ್ ಕರೆಯಲಾಗಿದೆ. ಸದ್ಯದಲ್ಲಿ ಗುತ್ತಿಗೆ ದಾರರನ್ನು ನೇಮಿಸಿ, ಕಾಮಗಾರಿಯನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಇ) ಬಂಕಾಪುರ ಜಂಕ್ಷನ್ ಅಭಿವೃದ್ಧಿಗೆ ಇದುವರೆವಿಗೆ 13.50 ಲಕ್ಷ ರೂ. ಖರ್ಚು ಮಾಡಲಾಗಿದೆ. ಡಾಂಬರೀಕರಣದ ಕಾಮಗಾರಿ ಮಾತ್ರ ಉಳಿದಿದ್ದು ಮಳೆಗಾಲ ಕಳೆದ ನಂತರ ಡಾಂಬರೀಕರಣದ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಮಂಜೂನಾಥ್ ಸಿ. ಕುನ್ನೂರ : ಮಾನ್ಯ ಅಧ್ಯಕ್ಷರೆ, ಶಿಗ್ಗಾವ್ ತಾಲ್ಲೂಕು ಬಂಕಾಪುರ ಕ್ರಾಸ್‌ನ ಹತ್ತಿರದಿಂದ ಮಹಾರಾಷ್ಟ್ರದ ಜತ್‌ವರೆಗೆ ಅಂತರ್‌ರಾಜ್ಯ ಹೆದ್ದಾರಿ ಕುರಿತು ಎಷ್ಟು ಹಣ ಮಂಜೂರಾಗಿದೆ ಎಂದರೆ 226.80 ಲಕ್ಷ ರೂಪಾಯಿಗಳು ಎಂದು ತಿಳಿಸಿದ್ದಾರೆ. ಈ ಹಣ 1994 ರಲ್ಲಿ ಕೇಂದ್ರ ಸಾರಿಗೆ ಸಚಿವಾಲಯದಿಂದ ಮಂಜೂರಾತಿಯಾಗಿದೆ. ಈಗ ಅವರು ಟೆಂಡರ್ ಕರೆದಿದ್ದೇವೆ, ಕೂಡಲೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಬೇಗನೆ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ಇದರ ಜೊತೆಗೆ ಈ ರಾಜ್ಯದಲ್ಲಿ ಸುಮಾರು 20 ಕೋಟಿ ಮಂಜೂರಾಗಿರುವುದರಿಂದ ಇಷ್ಟೊಂದು ವಿಳಂಬವಾಗಿ ಕೆಲಸ ಮಾಡುವುದರಿಂದ ಇದು ಬಹಳ ತಡವಾಗುತ್ತದೆ. ಕೇಂದ್ರ ಸರಕಾರದಿಂದ ಪಡೆದಂತಹ ಹಣವನ್ನು ಕೂಡ ಉಪಯೋಗ ಮಾಡಲಿಕ್ಕೆ ರಾಜ್ಯ ಸರಕಾರಕ್ಕೆ ಆಗುವುದಿಲ್ಲವೆಂದರೆ ಇದು ನಿಜವಾಗಿಯೂ ಬಹಳ ಶೋಚನೀಯ. ಕೂಡಲೇ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೊಂದು ಪ್ರಶ್ನೆ ಹಾಕಿದ್ದೇನೆ. ಬಂಕಾಪುರ ಕ್ರಾಸ್‌ನಲ್ಲಿ ಜಂಕ್ಷನ್ ಮಾಡಲಿಕ್ಕೆ 13.50 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಆದರೆ ಅಲ್ಲಿ ಸುಮಾರು 2-3 ಲಕ್ಷ ರೂಪಾಯಿಗಳ ಕೆಲಸವಾಗಿದೆಯೋ ಇಲ್ಲವೋ ಎಂದು ನನಗನ್ನಿಸುತ್ತದೆ. ಅದರ ಬಗ್ಗೆ ತಾವು ವಿಚಾರಣೆ ಮಾಡಬೇಕು. ಆ ಕೆಲಸವು ಕೂಡಲೇ ಆಗತಕ್ಕಂತಹ ಪ್ರಯತ್ನ ಮಾಡಬೇಕು ಎಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಮಂಜುನಾಥ್‌ರವರು ಈ ಯೋಜನೆಗೆ 1994ರಲ್ಲೇ ಮಂಜೂರಾತಿ ಸಿಕ್ಕಿದೆ ಎಂದು ಹೇಳಿದರು. 1994ರಲ್ಲಿ ಇದರ ಮಂಜೂರಾತಿಗೆ ಪ್ರಸ್ತಾವನೆ ಇತ್ತು. ಇದನ್ನು ಅವರ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಮಾರ್ಚ್ 18, 97ಕ್ಕೆ ಇದಕ್ಕೆ ಕೇಂದ್ರ ಸರಕಾರದಿಂದ ಮಂಜೂರಾತಿ ದೊರೆತಿದೆ. ಕೇಂದ್ರ ಸರಕಾರದಿಂದ ಹಣಕಾಸು ಅನುಮೋದನೆಗೆ ಒಪ್ಪಿಗೆ ದೊರೆತಿದೆ. ಅನುಮೋದನೆ ದೊರೆತ ಮೇಲೆ ಇಂತಹ 10 ಕೆಲಸಕಾರ್ಯಗಳನ್ನು ಮಾಡಬೇಕೆಂದು ಕರ್ನಾಟಕ ರಾಜ್ಯದಾದ್ಯಂತ ಪ್ರಸ್ತಾವನೆಯಾಗಿದೆ. ನಾವೆಲ್ಲ ಪ್ರಯತ್ನ ಮಾಡಿದ ಮೇಲೆ ಮಾರ್ಚ್ 18, 97ರಲ್ಲಿ ಇದಕ್ಕೆ ಅನುಮೋದನೆ ಸಿಕ್ಕಿದೆ. ಟೆಂಡರ್ ಕರೆಯಲಾಗಿದೆ. ಈ ತಿಂಗಳಲ್ಲಿ ಈ ಟೆಂಡರ್ ಗುತ್ತಿಗೆದಾರರನ್ನು ನೇಮಿಸುತ್ತಿರುವುದರಿಂದ ಕೆಲಸ ತೀವ್ರಗತಿಯಲ್ಲಿ ಆಗುತ್ತದೆ. ಬಂಕಾಪುರದಿಂದ ಹಿಡಿದು ಲಕ್ಷ್ಮೇಶ್ವರದವರೆಗಿನ 33 ಕಿಲೋ ಮೀಟರ್ ರಸ್ತೆಗಳಿಗೆ ಮೂರೂವರೆ ಕಿಲೋ ಮೀಟರ್ ಇದ್ದುದನ್ನು ಐದೂವರೆ ಕಿಲೋ ಮೀಟರ್‌ಗೆ ವಿಸ್ತರಣೆ ಮಾಡುವ ಸಲುವಾಗಿ 2 ಕೋಟಿ 26 ಲಕ್ಷ ರೂಪಾಯಿಗೆ

ಮಂಜೂರಾತಿ ದೊರೆತಿದ್ದು, ಈ ಕೆಲಸ ಅತಿ ಶೀಘ್ರದಲ್ಲೇ ಆಗುತ್ತದೆ. ಮತ್ತು ಅಲ್ಲಿ ಜಂಕ್ಷನ್ ಆಗಿರುವಲ್ಲಿ 13.50 ಲಕ್ಷ ರೂಪಾಯಿ ಕೆಲಸವಾಗಿದೆಯೇ ಎಂಬ ಬಗ್ಗೆ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಂಜೂನಾಥ್ ಸಿ ಕುನ್ನೂರ್ : ಮಾನ್ಯ ಸಚಿವರ ಉತ್ತರದಿಂದ ಸಮಾಧಾನವಾಗಿದೆ. ಆದರೂ ಈಗಲಾದರೂ ಕೆಲಸ ಬೇಗನೆ ಪ್ರಾರಂಭವಾಗುತ್ತದೆಯೇ? ಆದರೆ ಇದಕ್ಕೆ 94ರ ಮಾರ್ಚ್‌ನಲ್ಲಿ ಕೇಂದ್ರ ಸಾರಿಗೆ ಸಚಿವಾಲಯದಿಂದ ವಿತ್ ಸ್ಯಾಂಕ್ಷನ್ ಮಂಜೂರಾದಂತಹ ಆದೇಶ ಕೂಡ ಇದೆ. ಆದರೆ ತಾವು ಅದಕ್ಕೆ ಎಸ್ಟಿಮೇಟ್ ಪ್ಲಾನ್ ಸ್ಯಾಂಕ್ಷನ್ ಮಾಡಿಸಿಕೊಳ್ಳುವುದಕ್ಕೆ 97 ರವರೆಗೆ.....

ಅಧ್ಯಕ್ಷರು : ನೀವು ಹೇಳುವುದು ಮಾನ್ಯ ರಾಜಶೇಖರಮೂರ್ತಿಯವರು ಇದ್ದಾಗ ಇದಕ್ಕೆ ಮಂಜೂರಾತಿಯಾಗಿದೆ ಎಂದು. ಆಗ ಪ್ರಸ್ತಾವನೆ ಹೋಗಿತ್ತು ಅಷ್ಟೆ. ಮಂಜೂರಾತಿಯಾಗಿರುವುದು 97ರಲ್ಲಿ.

SRI MANJUNATH C. KUNNUR : He himself has sanctioned it when he was the surface Transport Minister in Central Government. ಆದರೆ ಇವರು ಅಲ್ಲಿಂದ 20 ಕೋಟಿ ಈ ರಾಜ್ಯಕ್ಕೆ ಮಂಜೂರಾಗಿರುವುದನ್ನು ಇವತ್ತಿನವರೆಗೆ ಅದಕ್ಕೆ ಟೆಕ್ನಿಕಲ್ ಮಂಜೂರಾತಿ ಅಥವಾ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಅಧ್ಯಕ್ಷರು : ಸುಮಾರು ಕೆಲಸಗಳು ಹಾಗೂ ನಮ್ಮದು ಒಂದು ರಸ್ತೆಯ ಬಗ್ಗೆ ಶ್ರೀಮಾನ್ ರಾಜಶೇಖರ್‌ಮೂರ್ತಿಯವರು ಕಡೇ ಗಳಿಗೆಯಲ್ಲಿ ಅದಕ್ಕೆ ಮಂಜೂರಾತಿ ಕೊಟ್ಟರು. ಆದರೆ ದುರಾದೃಷ್ಟವಶಾತ್ ಅಷ್ಟು ಹೊತ್ತಿಗೆ ಚುನಾವಣೆ ಡಿಕ್ಲೇರ್ ಆಯಿತು. ಅವು ಯಾವುವೂ ಚಾಲನೆಗೆ ಬರಲಿಲ್ಲ ಹಾಗೇ ನಿಂತು ಹೋಯಿತು. ಅದನ್ನೆಲ್ಲ ಮತ್ತೆ ಅವರು ರೇಕಪ್ ಮಾಡಿಸಿ ರೀ ಸಬ್‌ಮಿಟ್ ಮಾಡಸಿ, ಮಾಡಿಸಿಕೊಂಡು ಬಂದಿದ್ದಾರೆ. ಅವರು ಹೇಳಿದ್ದದ್ದು ನಿಜ. ದುರದೃಷ್ಟವಶಾತ್ ಅವರು ಸಹಿ ಮಾಡಿದ ದಿವಸವೇ ಚುನಾವಣೆಯು ಡಿಕ್ಲೇರ್ ಆದದ್ದು ನಿಜ. ಈಗ ಇವರು ಹೇಳುತ್ತಿರುವುದು ನಿಜ. ನಿಮ್ಮ ಕೆಲಸ ಆಗುತ್ತದೆ. ಆದರೆ ನೀವು ಬಂಕಾಪುರ ಸಾವಣೂರು ಇವೆರಡನ್ನೂ ಬಿಟ್ಟು ಮೂರನೆಯದನ್ನು ಕೇಳುವುದಿಲ್ಲ. ನಿಮ್ಮ ಮತ ಕ್ಷೇತ್ರಕ್ಕೆ ಬಂದು ನಾನು ಹೇಳುತ್ತೇನೆ. ಬೇರೆ ಊರು ನಿಮ್ಮ ಸುದ್ದಿಗೇ ಬರುವುದಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ : ಮಹಾರಾಷ್ಟ್ರದ ಬಗ್ಗೆಯೂ ಕೇಳಿದ್ದೇನೆ.

ಅಧ್ಯಕ್ಷರು : ಸರಿ.

ಶ್ರೀ ಸಿ.ಎಂ. ಉದಾಸಿ : ಬೇಕು ಎಂದು ಹೇಳಿದರೆ ಪ್ರಶ್ನೆಯನ್ನೇ ಅವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ನನಗೆ ಗೊತ್ತಿದೆ. ನಮ್ಮದು ಒಂದು ರಸ್ತೆಯದು ಇದೆ.